Mr. Speaker: We will take up a special discussion on this question tomorrow evening. Thanks for the provocation.

ಏಕಕಿಂಡಿ ವ್ಯವಸ್ಥೆ ಮೂಲಕ ಸಾಲ.

1477 - ಶ್ರೀ ಜಿ.ಎಸ್. ಆಚಾರ್ (ಬೈಂದೂರು): ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅಲ್ಪಾವಧಿ, ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ರಾಷ್ಟ್ರೀಕೃತ ಹಾಗೂ ವಾಣಿಜ್ಯ ಬ್ಯಾಂಕುಗಳಲ್ಲಿರುವಂತೆ ಸಹಕಾರಿ ರಂಗದಲ್ಲಿ ಸಹಾ "ಏಕ ಕಿಂಡಿ" ವ್ಯವಸ್ಥೆಯ ಮೂಲಕ ನೀಡುವ ಕುರಿತು ಸರಕಾರ ಪರ್ಯಾಲೋಚಿಸುವುದೇ?

ಆ) ಬೇರೆ ರಾಜ್ಯಗಳಲ್ಲಿ ಈ ಪ್ರಯೋಗ ನಡೆದಿರುವುದನ್ನು ಸರ್ಕಾರ ಗಮನಿಸಿದೆಯೇ?

ಇ) ಸರ್ಕಾರ ಈ ವಿಚಾರದಲ್ಲಿ ಸೂಕ್ತ ಕ್ರಮ ಕೈಗೊಳ್ಳುವುದೇ?

*ಶ್ರೀ ಕೆ.ಹೆಚ್. ಪಾಟೀಲ್, (ಸಹಕಾರ ಸಚಿವರು):

ಅ) ಈ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಗಮನಿಸಿದೆ.

ಇ) ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್: ಅಲ್ಪಾವಧಿ ಮತ್ತು ಮಧ್ಯಮಾವಧಿ, ದೀರ್ಘಾವಧಿ ಸಾಲಗಳನ್ನು ಏಕಕಿಂಡಿ ವ್ಯವಸ್ಥೆ ಮೂಲಕ ನೀಡುವ ವಿಚಾರ ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ತಿಳಿಸಿದ್ದೀರಿ. ಆದರೆ ಸಾಲ ಬಾಕಿ ಇಲ್ಲ ಎನ್ನುವ ಧೃಡ ಪತ್ರ ಪಡೆಯಲಿಕ್ಕೆ ಸಾಕಷ್ಟು ವಿಳಂಬವಾಗುತ್ತಿದೆ. ಕೆಲವೊಮ್ಮೆಯಂತೂ ರೈತರಿಗೆ ಬಹಳ ವಿಳಂಬವಾಗುತ್ತಿದೆ. ಅದನ್ನು ತಪ್ಪಿಸುವುದಕ್ಕೆ ಏಕಕಿಂಡಿ ವ್ಯವಸ್ಥೆಯನ್ನು ಕರ್ನಾಟಕದಲ್ಲಿ ಸರ್ಕಾರ ಜಾರಿಗೊಳಿಸುವುದೇ? ಇದನ್ನು ಸಹಕಾರಿ ರಂಗದಲ್ಲಿ ಏಕೆ ತರಬಾರದು? ಆಂಧ್ರ ಪ್ರದೇಶದಲ್ಲಿ ಇದನ್ನು ತಂದಿದ್ದಾರೆ. ನಮ್ಮ ಅಧಿಕಾರಿಗಳು ಆಂಧ್ರಕ್ಕೆ ಹೋಗಿ ಅಧ್ಯಯನ ಮಾಡಿ ಬಂದಿದ್ದಾರೆ. ಕರ್ನಾಟಕದಲ್ಲಿ ಏಕೆ ಇದನ್ನು ತರುವುದಕ್ಕಾಗುವುದಿಲ್ಲ. ಅಥವಾ ಬೇರೆ ಬೇರೆ ವ್ಯವಸ್ಥೆ ಬೇಕೆಂದು ಹೇಳುವ ಕೆಲವು ಶಕ್ತಿಗಳು ಇದಕ್ಕೆ ತಡೆಯಾಗಿದ್ದಾರೆಯೇ ಎಂಬ ಬಗ್ಗೆ ಮಾನ್ಯ ಮಂತ್ರಿಗಳು ಸ್ಪಷ್ಟವಾದ ಅಭಿಪ್ರಾಯ ಹೇಳಬೇಕು.

ಶ್ರೀ ಕೆ.ಹೆಚ್. ಪಾಟೀಲ್: ಕರ್ನಾಟಕ ರಾಜ್ಯದಲ್ಲಿ ಒಂದೇ ಹಂತದ ಮುಖಾಂತರವಾಗಿ ಸಾಲ ವಿತರಣೆಯಾಗಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯ ಕೂಡ ಆಗಿದೆ. ಸರಕಾರ ಈ ದಿಶೆಯಲ್ಲಿ ವಿಚಾರ ಮಾಡುತ್ತಿದೆ. ಆದರೆ ಇದಕ್ಕಿರತಕ್ಕಂತಹ ಸಾಧಕ ಬಾಧಕಗಳನ್ನು ವಿಚಾರ ಮಾಡಿ ನಂತರ ಸಚಿವ ಸಂಪುಟದ ಮುಂದಿಟ್ಟು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಈಗಾಗಲೇ ನಮ್ಮ ರಾಜ್ಯದ ರಿಜಿಸ್ಟ್ರಾರ್‌ರವರು ಬೇರೆ ಬೇರೆ ರಾಜ್ಯಗಳೊಡನೆ ಚರ್ಚೆ ಮಾಡಿ ಅಲ್ಲಿ ಮಾಡಿದಂತಹ ಅನುಭವಗಳನ್ನು ಆಧರಿಸಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿ ಸರ್ಕಾರದ ಪರಿಶೀಲನೆಯಲ್ಲಿದೆ. ಅದು ಪರಿಶೀಲನೆಯಾದ ನಂತರ ಸಚಿವ ಸಂಪುಟದ ಎದುರಿಗಿಟ್ಟು ಅಲ್ಲಿ ತೆಗೆದುಕೊಂಡ ತೀರ್ಮಾನವನ್ನು ಈ ಸದನದ ಎದುರಿಗಿಡುತ್ತೇನೆ.

ಅರಣ್ಯ ತಪಾಸಣಾ ಕೇಂದ್ರ

1378 - ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ): ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿರುವ ಅರಣ್ಯ ತಪಾಸಣಾ ಚೆಕ್‌ಪೋಸ್ಟ್ ಸಂಖ್ಯೆ ಎಷ್ಟು?

ಅ) ಸದರಿ ಚೆಕ್ ಪೋಸ್ಟ್‌ಗಳಲ್ಲಿ ಸಾಕಷ್ಟು ಸಿಬ್ಬಂದಿಯಿದೆಯೇ ಹಾಗೂ ಉತ್ತಮ ರೀತಿಯ ತಪಾಸಣೆ ಎಲ್ಲಾ ಕಡೆಗಳಲ್ಲಿ ನಡೆಸುತ್ತಿದೆಯೇ?

ಇ) ಬಂಟ್ವಾಳದ ಸಮೀಪದ ಮಣಿ ಹಳ್ಳದಲ್ಲಿದ್ದ ಚೆಕ್‌ಪೋಸ್ಟ್ ಈಗ ರದ್ದುಪಡಿಸಲಾಗಿದೆಯೇ ಹಾಗಿದ್ದಲ್ಲಿ ಕಾರಣಗಳೇನು?

ಈ) ಮಣಿ ಹಳ್ಳದ ಚೆಕ್ ಪೋಸ್ಟ್ ರದ್ದುಪಡಿಸಿರುವುದರಿಂದ ಮರಗಳ ಕಳ್ಳತನ ಮಾಡಿ ಸಮೀಪದ ಕಾರ್ಖಾನೆಗಳಿಗೆ ಸಾಗಿಸುತ್ತಿರುವ ಅವ್ಯವಹಾರ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ ಕೂಡಲೇ ಸದರಿ ಚೆಕ್‌ಪೋಸ್ಟ್ ಪುನರ್ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಇ.ಟಿ. ಶಂಭುನಾಥ್, (ಅರಣ್ಯ ಸಚಿವರು) :

ಅ) ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಅರಣ್ಯ ವಿಭಾಗದ ವ್ಯಾಪ್ತಿಯಲ್ಲಿ 11 ಚೆಕ್‌ಪೋಸ್ಟ್ ನಾಲತ್ತೂರು, ಉಕ್ಕಡ, ಜಾಲಸೂರು, ನಾಳಿಮುಖ, ಗುಂಡ್ಯ, ಉಪ್ಪಿನಂಗಡಿ, ಚಾರ್ಮುಡಿ, ಮುಡುತಿ, ತುಳಿಕುಂದ, ಕೋಟಿಕಾರ ಮತ್ತು ಲೆತ್ತಿನಪದವು ಜಾಗದಲ್ಲಿವೆ.

ಆ) ಈ 11 ಚೆಕ್‌ಪೋಸ್ಟ್‌ಗಳಲ್ಲಿ 4 ವನಪಾಲಕರು ಮತ್ತು 26 ಅರಣ್ಯ ರಕ್ಷಕರು ಕೆಲಸ ನಿರ್ವಹಿಸುತ್ತಿದ್ದು ಉತ್ತಮ ರೀತಿಯ ತಪಾಸಣೆ ಎಲ್ಲಾ ಕಡೆಯಲ್ಲಿ ನಡೆಯುತ್ತಿದೆ.

ಇ) ಬಂಟ್ವಾಳ ಸಮೀಪದ ಮಣಿ ಹಳ್ಳದಲ್ಲಿದ್ದ ಚೆಕ್‌ಪೋಸ್ಟ್‌ನ್ನು ಈಗ ದಿನಾಂಕ 2-1-91ರಲ್ಲಿ ರದ್ದುಪಡಿಸಿ ಇದನ್ನು ಮುಡಿಪ್ಪು ಎಂಬ ಸ್ಥಳಕ್ಕೆ ಸ್ಥಳಾಂತರಿಸಲಾಗಿದೆ.

ಈ) ಇದಕ್ಕೆ ಮುಖ್ಯ ಕಾರಣ ಈ ಪ್ರದೇಶದಲ್ಲಿ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆ ಆಗುತ್ತಿಲ್ಲ. ಸುಮಾರು $2\frac{1}{2}$ ವರ್ಷಗಳ ಅವಧಿಯಲ್ಲಿ ಕೇವಲ ಒಂದು ಅರಣ್ಯ ಕಳ್ಳಸಾಗಾಣಿಕೆ ಪ್ರಕರಣವನ್ನು ಈ ಚೆಕ್‌ಪೋಸ್ಟ್‌ನಿಂದ ಪತ್ತೆ ಹಚ್ಚಲಾಗಿದೆ. ಇದರ ಬದಲು ಕೇರಳ ಗಡಿಯ ಮುಡಿಪ್ಪು ಎಂಬ ಪ್ರದೇಶಕ್ಕೆ ಸ್ಥಳಾಂತರಿಸಿರುವುದರಿಂದ ಅಲ್ಲಿ ಕರ್ನಾಟಕದಿಂದ ಕೇರಳಕ್ಕೆ ಕಳ್ಳಸಾಗಾಣಿಕೆ ಆಗುವ ಅರಣ್ಯ ಉತ್ಪನ್ನಗಳ ಕಳ್ಳಸಾಗಾಣಿಕೆ ಪ್ರಕರಣಗಳನ್ನು ಯಶಸ್ವಿಯಾಗಿ ಹಿಡಿಯಲು ಸಹಾಯವಾಗುತ್ತದೆ.

ಉ) ಬಂದಿರುವುದಿಲ್ಲ.

ಊ) ಉದ್ಭವಿಸುವುದಿಲ್ಲ.

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ ನಾನು ಸದರಿ ಚೆಕ್‌ಪೋಸ್ಟ್‌ಗಳಲ್ಲಿ ಸಾಕಷ್ಟು ಸಿಬ್ಬಂದಿ ಇದೆಯೇ ಎಂದು ಕೇಳಿದ್ದಕ್ಕೆ 11 ಚೆಕ್‌ಪೋಸ್ಟ್‌ಗಳಲ್ಲಿ 4 ವನಪಾಲಕರು, 26 ಅರಣ್ಯ ರಕ್ಷಕರು ಇದ್ದಾರೆ. ಉತ್ತಮ ರೀತಿಯ ತಪಾಸಣೆ ನಡೆಯುತ್ತಿದೆ ಎಂದು ಹೇಳಿದ್ದಾರೆ. ಆದರೆ ನನಗೆ ತಿಳಿದ ಮಟ್ಟಿಗೆ ಈ ಚೆಕ್‌ಪೋಸ್ಟ್‌ಗಳಲ್ಲಿರುವ ಸಿಬ್ಬಂದಿಗಳು ಏನೇನೂ ಸಾಲದು. ಉತ್ತಮ ರೀತಿಯ ತಪಾಸಣೆ ಎಂದು ಹೇಳಿದರೆ ಕೆಲವು ಕಡೆಗಳಲ್ಲಿ ಕೋಟಿಕಾರರು ಹಾಗೂ ಬೇರೆ ಬೇರೆ ಕಡೆಗಳಲ್ಲಿ ನಡೆಯತಕ್ಕಂತಹ ಚೆಕ್‌ಪೋಸ್ಟ್‌ಗಳಲ್ಲಿ ಯಾರಾದರೂ ಹುಲ್ಲು ತೆಗೆದುಕೊಂಡು ಹೋಗುವಾಗ ಇಲ್ಲವೇ ಒಲೆ ಉರಿಸುವುದಕ್ಕೆ ತುಂಡು ಕಟ್ಟಿಗೆಯನ್ನು ಕೊಂಡು ಹೋಗುವಾಗ ಅವರನ್ನು ಹಿಡಿದು ಶಿಕ್ಷಿಸುತ್ತಾರೆ. ಒಳ್ಳೆಯ ಬೀಟೆ ಮರಗಳನ್ನು ತೆಗೆದುಕೊಂಡು ಹೋಗುವವರನ್ನು ಹಾಗೇ ಬಿಟ್ಟಿದ್ದು ಉಂಟು ಎಂದು ಹೇಳಿ ಅನೇಕ ವಿಚಾರಗಳು ನಮ್ಮ ಗಮನಕ್ಕೆ ಬಂದಿದೆ. ಈ ಚೆಕ್‌ಪೋಸ್ಟ್‌ಗಳನ್ನು ಇನ್ನೂ ಒಳ್ಳೆ ರೀತಿಯಲ್ಲಿ ಚುರುಕುಗೊಳಿಸಲಿಕ್ಕೆ ಹಾಗೂ ಕಳ್ಳ ಸಾಗಾಣಿಕೆ ಆಗದಂತೆ ಸೂಕ್ತ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಇ.ಟಿ. ಶಂಭುನಾಥ್: ಇದು ಬಹಳ ಉತ್ತಮವಾದ ಸಲಹೆ. ಇನ್ನೂ ಸ್ವಲ್ಪ ವನ ಪಾಲಕರನ್ನು ಹಾಗೂ ಗಾರ್ಡ್‌ಗಳನ್ನು ಹೆಚ್ಚಿಸಿ ಚೆಕ್‌ಪೋಸ್ಟ್‌ಗಳನ್ನು ಬಲಿಷ್ಠಗೊಳಿಸಲಿಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ.ಎಂ. ಇದಿನಬ್ಬ: ಮಾನ್ಯ ಅಧ್ಯಕ್ಷರೇ, ಮಣಿದಳ್ಳದಲ್ಲಿದ್ದ ಚೆಕ್‌ಪೋಸ್ಟ್ ಅನ್ನು ರದ್ದುಪಡಿಸಿದ್ದರಿಂದ ಮರಗಳ್ಳತನ ಮಾಡಿ ಸಮೀಪದ ಕಾರ್ಖಾನೆಗಳಿಗೆ ಸಾಗಿಸುತ್ತಾರೆಯೇ ಎಂದು ಕೇಳಿದ್ದಕ್ಕೆ, ಅದನ್ನು ರದ್ದುಪಡಿಸಿ ಮುಡಿಪ್ಪುನಲ್ಲಿ ಮಾಡಿದ್ದೇನೆ ಎಂದು ಹೇಳಿದ್ದೀರಿ. ಮುಡಿಪ್ಪುನಲ್ಲಿ ತೆರೆದಿರುವುದು ಬಹಳ ಒಳ್ಳೆಯದು; ಏಕೆಂದರೆ ಅದು ಗಡಿಪ್ರದೇಶ ಇದೆ. ಆದರೆ ಮಣಿಹಳ್ಳದಲ್ಲಿ ಕೂಡ ಬಹಳ ಕಳ್ಳಸಾಗಾಣಿಕೆಯಾಗುತ್ತಿದೆ. ಕಾರ್ಖಾನೆಗಳಿಗೆ ಮರ ಸಾಗಿಸುತ್ತಿದ್ದಾರೆ ಎಂದು ಅನೇಕ ಪತ್ರಿಕೆಗಳಲ್ಲಿ, ಮಂಗಳೂರಿನ ಉದಯವಾಣಿಯಲ್ಲಿ, ಅದೇ ರೀತಿ ಮುಂಗಾರುವಿನಲ್ಲಿ ಅನೇಕ ಸಲ ಬಂದಿದೆ. ಆದ್ದರಿಂದ ಮಣಿಹಳ್ಳದಲ್ಲಿ ಕೂಡ ನೀವು ಚೆಕ್‌ಪೋಸ್ಟ್ ಇಡುವಂಥಾದ್ದು ಒಳ್ಳೆಯದು, ಮುಡಿಪ್ಪುನಲ್ಲಿ ಇಡುವುದು ಒಳ್ಳೆಯದು. ಹಾಗಿದ್ದರೆ ಈ ಕಳ್ಳಸಾಗಾಣಿಕೆ ತಪ್ಪಿಸಲು ಸಾಧ್ಯವಾಗುತ್ತದೆ. ಹೀಗೆ ಮಾಡುತ್ತೀರಾ ಸ್ವಾಮಿ?

ಶ್ರೀ ಇ.ಟಿ. ಶಂಭುನಾಥ್: ಪರಿಶೀಲಿಸಲಾಗುವುದು.

ಶ್ರೀ ಜಿ.ಎಸ್. ಆಚಾರ್: ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಿಂದ ಮನೆಗೆ ಹೋಗುವಾಗ ಎರಡು ಚೆಕ್‌ಪೋಸ್ಟ್‌ಗಳು ಸಿಗುತ್ತವೆ. ನಾನು ರಾತ್ರಿ ಹೊತ್ತು ನಾನು ನೋಡುತ್ತಾ ಇರುತ್ತೇನೆ. ಆ ಚೆಕ್‌ಪೋಸ್ಟ್‌ನಲ್ಲಿ ಅಡ್ಡ ಹಾಕದೆ, ತೆರೆದಿರುತ್ತದೆ. ಆ ಚೆಕ್‌ಪೋಸ್ಟ್ ಸಿಬ್ಬಂದಿ ಯಾರಿದ್ದಾರೆ, ಅವರು ಆರಾಮವಾಗಿ ನಿದ್ದೆ ಮಾಡುತ್ತಿರುತ್ತಾರೆ. ನಾವು ವೆಹಿಕಲ್‌ನಲ್ಲಿ ಸೀದಾ ಬರಬಹುದು. ಹಗಲು ಹೊತ್ತಿನಲ್ಲಿ ದಂಡ ಹಾಕಿ ಪ್ರತಿಬಂಧಕ ಇಟ್ಟಿರುತ್ತಾರೆ. ಅಂದರೆ ಸಾರ್ವಜನಿಕವಾಗಿ ಚೆಕ್‌ಪೋಸ್ಟ್ ಇದೆ ಎಂಬುದು ಎಲ್ಲರಿಗೂ ಗೊತ್ತಾಗಿದೆ. ಆದರೆ ರಾತ್ರಿ ಹೊತ್ತು ವಾಹನಗಳು ಸೀದಾ ಹೋಗುತ್ತದೆ. ಈ ರೀತಿ ಆಗುತ್ತಿರುವ ಕಳ್ಳಸಾಗಾಣಿಕೆ ತಡೆಯಲಿಕ್ಕೆ ಮಾನ್ಯ ಮಂತ್ರಿಗಳು ಪ್ರಯತ್ನ ಮಾಡುತ್ತಾರೆಯೇ ಎಂದು ಕೇಳಬಯಸುತ್ತೇನೆ?

ಶ್ರೀ ಇ.ಟಿ. ಶಂಭುನಾಥ್: ಒಳ್ಳೆಯ ಸಲಹೆ. ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದು.

ಅಧ್ಯಕ್ಷರು: 216ನೇ ಪ್ರಶ್ನೆ ಕೇಳಬೇಕಾದ ಪ್ರಭುಕುಮಾರ್ ಅವರು ಸಭೆಯಲ್ಲಿ ಇಲ್ಲ. ಇಲ್ಲಿಗೆ ಪ್ರಶ್ನೋತ್ತರ ಅವಧಿ ಮುಗಿಯಿತು. ಈಗ ಲಿಖಿತ ಮೂಲಕ ಉತ್ತರಿಸಬೇಕಾದ ಪ್ರಶ್ನೆಗಳ ಪಟ್ಟಿಯನ್ನು ಮಾನ್ಯ ಮಂತ್ರಿಗಳು ಮಂಡಿಸಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಕರ್ನಾಟಕ ರಾಜ್ಯ ಆಹಾರ ನಿಗಮದಲ್ಲಿ ರೋಸ್ಟರ್ ಪದ್ಧತಿ.

1382 - ಶ್ರೀ ಎನ್.ಜಿ. ನಾಯಕ್ (ಮೊಳಕಾಲ್ಮೂರು): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಆಹಾರ ನಿಗಮದಲ್ಲಿ ಕಳೆದ 1971ನೇ ಇಸವಿಯಿಂದ ನೇಮಕ ಮಾಡಲಾಗಿರುವ ಸಿಬ್ಬಂದಿಗಳ ಒಟ್ಟು ಸಂಖ್ಯೆ ಎಷ್ಟು? (ವರ್ಗವಾರು ವಿವರಗಳನ್ನು ನೀಡುವುದು). ಈ ನೇಮಕಾತಿಯಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸಲಾಗಿದೆಯೇ?

ಆ) ಹಾಗಿಲ್ಲದಿದ್ದಲ್ಲಿ ಅದಕ್ಕೆ ಕಾರಣಗಳೇನು?